**ಓ ಎಸ್ 73/2022 ಡಿಡಬ್ಲ್ಯೂ1**

**ಸಾಕ್ಷಿಯನ್ನು ದಿಃ 28.02.2026 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ವಾದಿ ಪರ ಶ್ರೀ ಎಂ ಎಸ್ ಪಿ ವಕೀಲರಿಂದಃ**

ನಾನು ಹುಟ್ಟಿದ ವರ್ಷ 1987. 1997-98 ರಲ್ಲಿ ನನಗೆ 12 ರಿಂದ 13 ವರ್ಷ ಆಗಿದೆ. 1997-98 ರಲ್ಲಿ ನನಗೆ 10 ವರ್ಷ ಆಗಿತ್ತು ಎಂದರೆ ಸರಿ. 2000-01 ರ ವೇಳೆಗೆ ನನಗೆ ಕೇವಲ 12 -13 ವರ್ಷ ಎಂದರೆ ಸರಿ. ನಾನು ಹಾಜರುಪಡಿಸಿರುವ ನಿಶಾನೆ ಡಿ 13 ರಿಂದ 27 ರವರೆಗಿನ ಕ್ರಯಪತ್ರ ಹಾಗೂ ಕಂದಾಯ ದಾಖಲೆಗಳ ದಿನಾಂಕಗಳ ವೇಳೆಗೆ ನಮ್ಮ ಕುಟುಂಬದಲ್ಲಿ ಯಾವುದೇ ಪಾಲು ವಿಭಜನೆ ಆಗಿರಲಿಲ್ಲ ಎಂದರೆ ಸರಿ. 2019 ರಲ್ಲಿ ವಿಭಾಗ ಆಗುವವರೆಗೂ ನಮ್ಮ ತಂದೆಯೇ ನಮ್ಮ ಕುಟುಂಬದ ಯಜಮಾನಿಕೆಯನ್ನು ಮಾಡುತ್ತಿದ್ದರು. ನಮ್ಮ ತಂದೆಯು ಯಜಮಾನಿಕೆಯನ್ನು ಮಾಡುತ್ತಿದ್ದ ಕಾಲದವರೆಗೂ ನಿಶಾನೆ ಡಿ 13 ರಿಂದ 27 ರವರೆಗಿನ ಕ್ರಯಪತ್ರ ಹಾಗೂ ಕಂದಾಯ ದಾಖಲೆಗಳ ಆಸ್ತಿಗಳೆಲ್ಲವನ್ನು ನಮ್ಮ ಒಟ್ಟು ಕುಟುಂಬದ ಆಸ್ತಿಗಳು ಎಂದು ನಾವು ಪರಿಗಣಿಸಿದ್ದೆವು ಎಂದರೆ ಸರಿಯಲ್ಲ. ನನ್ನ ಸಹೋದರಿ ನೇತ್ರಾವತಿ ಹೂಡಿದ್ದ ಅಸಲು ದಾವಾ ಸಂಖ್ಯೆ 75/2017 ರಲ್ಲಿ ಈ ದಾವೆಯ ನಿಶಾನೆ ಡಿ 13 ರಿಂದ 27 ರವರೆಗಿನ ದಾಖಲೆಗಳಲ್ಲಿ ಹೆಸರಿಸಿರುವ ಆಸ್ತಿಗಳು ಸಹ ನಮ್ಮ ಪಿತ್ರಾರ್ಜಿತ ಹಾಗೂ ಒಟ್ಟು ಕುಟುಂಬದ ಆಸ್ತಿಗಳು ಎಂದು ನನ್ನ ಸಹೋದರಿ ಪ್ರತಿಪಾದಿಸಿದ್ದರು ಎಂದರೆ ನನಗೆ ಗೊತ್ತಿಲ್ಲ, ಸಾಕ್ಷಿ ಮುಂದುವರಿದು ಗಣಿಗಾರಿಕೆ ಮಾಡಿ ಸ್ವಂತ ಆದಾಯದಿಂದ ನಿಶಾನೆ ಡಿ 13 ರಿಂದ 27 ರವರೆಗಿನ ದಾಖಲೆಗಳಲ್ಲಿರುವ ಆಸ್ತಿಗಳನ್ನು ಖರೀದಿಸಿರುವುದಾಗಿ ಹೇಳುತ್ತಾರೆ. ಈ ರೀತಿಯಾಗಿ ನಿಲುವು ತೆಗೆದುಕೊಂಡು ಅಸಲು ದಾವಾ ಸಂಖ್ಯೆ 75/2017 ರಲ್ಲಿ ನಾನು ಪ್ರತಿವಾದ ಪತ್ರ ಸಲ್ಲಿಸಿಲ್ಲ, ಏಕೆಂದರೆ ದಾವೆ ಹೂಡಿದ ಕೆಲವೇ ದಿನಗಳಲ್ಲಿ ದಾವೆ ರಾಜಿಯಾಗಿ ಡಿಕ್ರಿಯಾದ ಕಾರಣ ಪತಿವಾದ ಪತ್ರ ಸಲ್ಲಿಸಲಿಲ್ಲ. ಈ ದಾವೆಯಲ್ಲಿ ಈಗ ನಾನು ಹಾಜರುಪಡಿಸಿರುವ ನಿಶಾನೆ ಡಿ 13 ರಿಂದ 27 ರವರೆಗಿನ

ದಾಖಲೆಗಳಲ್ಲಿ ನಮೂದಿಸಿರುವ ಆಸ್ತಿಗಳು ಯಾರ ಯಾರ ಸ್ವಯಾರ್ಜಿತ ಆಸ್ತಿಗಳು ಮತ್ತು ಅವುಗಳು ಯಾರು ಯಾರಿಗೆ ಸೇರಬೇಕು ಎಂದು ನಿಶಾನೆ ಡಿ 6 ರಲ್ಲಿರುವ ರಾಜಿ ಡಿಕ್ರಿಯಲ್ಲಿ ನಮೂದು ಆಗಿಲ್ಲ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ, ನಮ್ಮ ತಂದೆಯೇ ನಮಗೆ ಭಾಗ ನೀಡಿದ್ದಾರೆ. ನಿಶಾನೆ ಡಿ 6 ರ ರೀತ್ಯಾ ನಾವು ರಾಜಿ ಡಿಕ್ರಿ ಮಾಡಿಕೊಳ್ಳುವಾಗ ವಾದಿಯನ್ನು ಸದರಿ ಡಿಕ್ರಿಗೆ ಪಕ್ಷಕಾರಳನ್ನಾಗಿ ಮಾಡಿಲ್ಲ ಹಾಗೂ ಈ ದಾವೆಯ ನಿಶಾನೆ ಡಿ 13 ರಿಂದ 27 ರವರೆಗಿನ ದಾಖಲೆಗಳಲ್ಲಿನ ಆಸ್ತಿಗಳು ಯಾರ ಯಾರ ಸ್ವಯಾರ್ಜಿತ ಮತ್ತು ಯಾರು ಯಾರಿಗೆ ಸೇರಬೇಕು ಎಂದು ನಮೂದಿಸದೆ ರಾಜಿ ಪತ್ರ ಮಾಡಿಕೊಂಡಿದ್ದೇವೆ ಎಂದರೆ ನಮ್ಮ ತಂದೆಯು ನಮ್ಮ ತಂಗಿ ನೇತ್ರಾವತಿ ಕೈಯಲ್ಲಿ ಕೇಸು ಹಾಕಿಸಿ ವಿಭಾಗ ಮಾಡಿದ್ದಾರೆ. ನಾನು, ನನ್ನ ತಂದೆ, ತಾಯಿ ಹಾಗೂ ತಮ್ಮ ಒಟ್ಟಿಗೆ ಸೇರಿ ರಾಜಿ ಪತ್ರ ತಯಾರಿಸಿ ಸಹಿ ಮಾಡಿದ್ದೇವೆ ಎಂದರೆ ನಮ್ಮ ತಂದೆಯು ಹೇಳಿದ ಕಾರಣ ಸಹಿ ಮಾಡಿದ್ದೇನೆ. ರಾಜಿ ಪತ್ರ ಹಾಗೂ ರಾಜಿ ಡಿಕ್ರಿಯ ಸಂಗತಿಗಳು ನನಗೆ ಗೊತ್ತಿರಲಿಲ್ಲ, ರಾಜಿ ಡಿಕ್ರಿಯನ್ನು ಪಡೆದುಕೊಂಡ ನಂತರ ಅದರಲ್ಲಿನ ಸಂಗತಿಗಳು ಗೊತ್ತಾಯಿತು. ನಿಶಾನೆ ಡಿ 13 ರಿಂದ 27 ರವರೆಗಿನ ದಾಖಲೆಗಳಲ್ಲಿನ ಆಸ್ತಿಗಳು ಯಾರ ಯಾರ ಸ್ವಯಾರ್ಜಿತ ಮತ್ತು ಯಾರು ಯಾರಿಗೆ ಸೇರಬೇಕು ಎಂದು ರಾಜಿ ಅರ್ಜಿ ಮತ್ತು ರಾಜಿ ಡಿಕ್ರಿಯಲ್ಲಿ ನಮೂದಿಸಿಲ್ಲ ಎಂದು ನಾವು ಯಾವುದೇ ಸಕ್ರಮ ಪ್ರಾಧಿಕಾರದ ಮುಂದೆ ಮೇಲ್ಮನವಿ ಸಲ್ಲಿಸಿಲ್ಲ, ಏಕೆಂದರೆ ಯಾರ ಯಾರ ಹೆಸರಿಗೆ ಯಾವ ಜಮೀನು ನ್ಯಾಯಾಲಯದಲ್ಲಿ ಆಗಿದೆಯೋ ಆ ಪ್ರಕಾರ ಮಾಡಿಕೊಳ್ಳಿ ಎಂದು ನಮ್ಮ ತಂದೆಯು ನಮಗೆ ಹೇಳಿದ ಕಾರಣ ನಾವು ಮೇಲ್ಮನವಿ ಸಲ್ಲಿಸಲಿಲ್ಲ. ನಿಶಾನೆ ಡಿ 28 ರಲ್ಲಿರುವ ನಮ್ಮ ತಂದೆಯ ಸ್ವಯಾರ್ಜಿತ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ, ವಾದಿಯು ತನಗೆ ಯಾವುದು ಬೇಕು ಅದನ್ನು ಮಾತ್ರ ಸೇರಿಸಿಕೊಂಡಿದ್ದಾರೆ. ಅಸಲು ದಾವಾ ಸಂಖ್ಯೆ 75/2017 ರಲ್ಲಿನ ಆಸ್ತಿಗಳೆಲ್ಲವೂ ನಮ್ಮ ಒಟ್ಟು ಕುಟುಂಬದ ಆಸ್ತಿಗಳುಎಂದುಹೇಳಿಕೊಂಡು ವ್ಯವಹರಣೆ ನಡೆಸಿ ಈ ದಾವೆಯಲ್ಲಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)

ಸಾ ಓ ಹೇ ಸ ಒ

(ಬಾಬು ಎನ್)
1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಪಾಂಡವಪುರ